ಕನ್ನಡದಂತಹ ದೇಸಿ ಭಾಷಾ ಮಾಧ್ಯಮದಲ್ಲಿಯೇ ಓದಿದ ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಮಟ್ಟಗಳಲ್ಲಿ ಗುಣಮಟ್ಟದ ಪಠ್ಯಪುಸ್ತಕಗಳ ಲಭ್ಯತೆ ಇಲ್ಲದಿರುವುದರಿಂದ ಅನಿವಾರ್ಯವಾಗಿ ಇಂಗ್ಲಿಷ್ ಮಾಧ್ಯಮವನ್ನೇ ಆರಿಸಿಕೊಳ್ಳಬೇಕಾಗುತ್ತದೆ. ಇಂಗ್ಲಿಷ್ ಮಾಧ್ಯಮದಲ್ಲಿಯೇ ಓದಿದ ವಿದ್ಯಾರ್ಥಿಗಳಿಗೆ ಹೋಲಿಸಿದರೆ ದೇಸಿ ಭಾಷಾ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು ತುಂಬಾ ತೊಂದರೆ ಅನುಭವಿಸಬೇಕಾಗುತ್ತದೆ.

ಕನ್ನಡದಲ್ಲಿಯೇ ವಿಜ್ಞಾನ ವಿಷಯಗಳನ್ನು ಅಧ್ಯಯನ ಮಾಡುವುದಾದರೆ?

ಅದೊಂದು ಶನಿವಾರ. ಮಧ್ಯಾಹ್ನದ ವೇಳೆ. ಅಕ್ಟೋಬರ್ ತಿಂಗಳಾದರೂ ಕೂಡಾ ಬೆಂಗಳೂರಿನಲ್ಲಿ ಮಳೆ ಮತ್ತು ಚಳಿಯ ವಾತಾವರಣವಿತ್ತು. ಎಂಟು ಜನ ಶಿಕ್ಷಣತಜ್ಞರನ್ನೊಳಗೊಂಡ ಸಮಾನಾಸಕ್ತ ಗುಂಪೊಂದು ಪ್ರಖ್ಯಾತ ರಾಮನ್ ಸಂಶೋಧನಾ ಸಂಸ್ಥೆಯ (ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟ್) ಆವರಣದಲ್ಲಿಯೇ ಇರುವ ಭಾರತೀಯ ವಿಜ್ಞಾನ ಅಕಾಡೆಮಿಯ (ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್) ಸಭಾಂಗಣದಲ್ಲಿ ಸೇರಿತ್ತು. ಅವರಲ್ಲಿ ಬಹುತೇಕ ಜನರು ಬೆಂಗಳೂರು ಮತ್ತು ಸುತ್ತಮುತ್ತಲಿನ ವಿವಿಧ ಸಂಸ್ಥೆ ಹಾಗೂ ಖ್ಯಾತ ವಿಶ್ವವಿದ್ಯಾಲಯಗಳಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕರಾಗಿದ್ದರು. ಭೌತವಿಜ್ಞಾನಕ್ಕೆ ಸಂಬಂಧಿಸಿದ, ಮುಖ್ಯವಾಗಿ ಕಾಲೇಜು ಮಟ್ಟದ ಪಠ್ಯಪುಸ್ತಕಗಳಾದ ಬರ್ಕ್‌ಲೀ ಸರಣಿ ಪುಸ್ತಕಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುವ ಕಾರ್ಯಯೋಜನೆಯೊಂದನ್ನು ಹಮ್ಮಿಕೊಳ್ಳಲಾಗಿದೆ. ಸಹಭಾಗಿತ್ವದ ಆಧಾರದ ಮೇಲೆ ಕೈಗೊಳ್ಳಲಾದ ಈ ಯೋಜನೆಯಡಿ, ಐದು ಸಂಪುಟಗಳಲ್ಲಿ ಮೂರನ್ನು ಅನುವಾದಿಸುವ ಪ್ರಯತ್ನದಲ್ಲಿ ಅವರು ಕಳೆದ ಒಂದು ವರುಷದಿಂದಲೂ ಬಹಳ ಉತ್ಸಾಹದಿಂದ ತೊಡಗಿಕೊಂಡಿದ್ದರು.

ಬರ್ಕ್‌ಲೀ ಸರಣಿಯ ಪಠ್ಯಪುಸ್ತಕಗಳನ್ನು ಬರೆದಿದ್ದು 1960ರ ದಶಕದ ಮೊದಲ ಭಾಗದಲ್ಲಿ. ಪಶ್ಚಿಮದಲ್ಲಿ ಸಿದ್ಧವಾದ ಈ ಸರಣಿಗೆ ನ್ಯಾಷನಲ್ ಸೈನ್ಸ್

ಫೌಂಡೇಷನ್ ಅನುದಾನ ನೀಡಿತ್ತು. ಕೆಲವು ವರ್ಷಗಳ ಹಿಂದೆ ಮುಖ್ಯವಾಗಿ ಅಂದಿನ ಸೋವಿಯಟ್ ಒಕ್ಕೂಟವು ಜಗತ್ತಿನ ಮೊತ್ತಮೊದಲ ಕೃತಕ ಉಪಗ್ರಹ, ಸ್ಪುಟ್ನಿಕ್ ಅನ್ನು ಉಡಾವಣೆ ಮಾಡಿದ ಹಿನ್ನೆಲೆಯಲ್ಲಿ ವಿಜ್ಞಾನ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಪ್ರಾಮಾಣಿಕ ಆಶಯ ಅಲ್ಲಿತ್ತು. ಮ್ಯಾಕ್‌ಗ್ರಾ ಹಿಲ್ ಪ್ರಕಾಶನ ಸಂಸ್ಥೆಯು ಪ್ರಕಟಿಸಿದ ಈ ಸರಣಿಯು ಐದು ಸಂಪುಟಗಳನ್ನು ಹೊಂದಿದೆ. ಯಂತ್ರವಿಜ್ಞಾನ (ಮೆಕ್ಯಾನಿಕ್ಸ್), ವಿದ್ಯುಚ್ಛಕ್ತಿ ವಿಜ್ಞಾನ (ಎಲೆಕ್ಟ್ರಿಸಿಟಿ) ಮತ್ತು ಕಾಂತೀಯತೆ (ಮ್ಯಾಗ್ನೆಟಿಸಮ್) ತರಂಗಗಳು, ಕ್ವಾಂಟಮ್ ಭೌತವಿಜ್ಞಾನ ಹಾಗೂ ಸಂಖ್ಯಾಶಾಸ್ತ್ರೀಯ ಭೌತವಿಜ್ಞಾನಗಳಂತಹ ಭೌತವಿಜ್ಞಾನದ ಮೂಲಭೂತ ಜ್ಞಾನಕ್ಷೇತ್ರಗಳನ್ನು ಒಳಗೊಂಡಿದೆ. ಭೌತವಿಜ್ಞಾನವನ್ನು ಪ್ರಧಾನ ವಿಷಯವಾಗಿ ಆಯ್ದುಕೊಳ್ಳುವ ಆನರ್ಸ್ ಮತ್ತು ಪದವಿ ತರಗತಿಯ ವಿದ್ಯಾರ್ಥಿಗಳಿಗೆ ಈ ಸರಣಿಯನ್ನು ಇಂದಿಗೂ ಬೋಧಿಸಲಾಗುತ್ತದೆ ಎಂದರೆ ಇದರ ಮಹತ್ವದ ಅರಿವಾಗುತ್ತದೆ.

ವಿಶಾಲ ದೃಷ್ಟಿಕೋನದಿಂದ ನೋಡುವುದಾದರೆ, ಕನ್ನಡ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಮಟ್ಟಗಳಲ್ಲಿ ಬಹುತೇಕ ಎಲ್ಲಾ ವಿಷಯಗಳಲ್ಲಿಯೂ ಒಳ್ಳೆಯ ಗುಣಮಟ್ಟದ ಪಠ್ಯಪುಸ್ತಕಗಳ ಲಭ್ಯತೆಗೆ ಸಂಬಂಧಿಸಿದಂತೆ ಅಗಾಧವಾದ ಅಂತರವಿದೆ. ಪದವಿಪೂರ್ವ ಅಥವಾ ಪದವಿ ಹಂತದ ತನಕವೂ ಕೂಡ ಹಿಂದಿ ಮತ್ತು ಕನ್ನಡದಂತಹ ದೇಸಿ ಭಾಷಾ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು ನಂತರ ಉನ್ನತ ಶಿಕ್ಷಣ ಮಟ್ಟದಲ್ಲಿ ಅಂದರೆ ಪದವಿ ಅಥವಾ ಸ್ನಾತಕೋತ್ತರ ತರಗತಿಗಳಲ್ಲಿ ಓದುವಾಗ ಅನಿವಾರ್ಯವಾಗಿ ಇಂಗ್ಲಿಷ್ ಮಾಧ್ಯಮವನ್ನೇ ಆರಿಸಿಕೊಳ್ಳಬೇಕಾಗುತ್ತದೆ. ಆರಂಭದಿಂದಲೂ ಇಂಗ್ಲಿಷ್ ಮಾಧ್ಯಮದಲ್ಲಿಯೇ ಓದಿದ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಅವರು ತುಂಬಾ ತೊಂದರೆ ಅನುಭವಿಸಬೇಕಾಗುತ್ತದೆ. ಉಳಿದಿರುವ ಪರ್ಯಾಯ ಮಾರ್ಗವೆಂದರೆ, ತಮ್ಮದೇ ಭಾಷೆಯಲ್ಲಿನ ಕಳಪೆ ಗುಣಮಟ್ಟದ ಪುಸ್ತಕಗಳು ಅಥವಾ ಗೈಡ್‌ಗಳನ್ನು ಅವಲಂಬಿಸುವುದು. ಇದು ಇನ್ನಷ್ಟು ಹಾನಿಕಾರಕ.

ಆತಂಕ ಹುಟ್ಟಿಸುವ ಈ ಸನ್ನಿವೇಶಕ್ಕೆ ಸ್ಪಂದನೆಯ ರೂಪದಲ್ಲಿ ನಮ್ಮ ವಿಶ್ವವಿದ್ಯಾಲಯವು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಅನುಕೂಲವಾಗುವ ರೀತಿಯಲ್ಲಿ ಹಿಂದಿ ಮತ್ತು ಕನ್ನಡದಲ್ಲಿ ಗುಣಮಟ್ಟದ ಸಂಪನ್ಮೂಲ ಸಾಮಗ್ರಿ ಲಭ್ಯವಾಗುವಂತೆ ದೊಡ್ಡ ಪ್ರಮಾಣದಲ್ಲಿ ಅನುವಾದ ಉಪಕ್ರಮವನ್ನು ಕೈಗೊಂಡಿದೆ. ಮುಂದಿನ ಕೆಲವು ವರ್ಷಗಳಲ್ಲಿ ವೃತ್ತಿನಿರತರೂ ಸೇರಿದಂತೆ ವಿದ್ಯಾರ್ಥಿಗಳಿಗೆ 'ಶಿಕ್ಷಣ' ವಿಷಯದಡಿ ಈ ಎರಡೂ ಮಾಧ್ಯಮಗಳಲ್ಲಿ ಅಗತ್ಯ ಕೋರ್ಸ್‌ಗಳನ್ನು ನೀಡುವ ಸಾಧ್ಯತೆಗಳತ್ತ ಗಮನಹರಿಸುತ್ತಿದೆ. ಈ ವಿಶಾಲ ಹಿನ್ನೆಲೆಯಲ್ಲಿ ಭೌತವಿಜ್ಞಾನ ಅನುವಾದ ತಂಡದ ಅನುಸಂಧಾನವು ಹೆಚ್ಚಿನ ಮಹತ್ವ ಪಡೆಯುತ್ತದೆ.

ಭೌತವಿಜ್ಞಾನ ತಂಡದ ಸಭೆಯು ಆರಂಭದಲ್ಲಿ ಈಗಾಗಲೇ ಆಗಿರುವ ಅನುವಾದ ಹಾಗೂ ಪರಿಶೀಲನೆಯ ಕಾರ್ಯಗಳನ್ನು ನಿಖರವಾಗಿ ಪುನರಾವಲೋಕನ ಮಾಡಿತು. ಮುಂದಿನ ಕೆಲವು ತಿಂಗಳುಗಳಲ್ಲಿ ಅನುವಾದಿತ ಆ ತಂಡವು ಅಧ್ಯಾಯಗಳ ಪರಿಶೀಲನೆಯನ್ನು ಕುರಿತು ತಾನು ಮಾಡಬೇಕಿರುವ ಕೆಲಸವನ್ನು ತೀವ್ರಗೊಳಿಸಲು ನಿರ್ಧರಿಸಿತು. ಅನುವಾದ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಸೂಕ್ಷ್ಮ ಸಂಗತಿಗಳನ್ನು ಕುರಿತಂತೆ ತಂಡವು ಸಹಮತಕ್ಕೆ ಬಂದಿತು. ಅನುವಾದಕರ ಸ್ವತಂತ್ರ ಅರ್ಥವಿವರಣೆಗಳನ್ನು ದೂರವಿಡಲು ಕೂಡ ತೀರ್ಮಾನಿಸಲಾಯಿತು. ತಂಡವು ಅನುವಾದಕ್ಕೆ ಸಂಬಂಧಿಸಿದಂತೆ ಕೆಲವು ಪ್ರಮುಖ ತತ್ತ್ವಗಳನ್ನು ಪ್ರಜಾತಾಂತ್ರಿಕ ರೀತಿಯಲ್ಲಿ ರೂಪಿಸಿದ್ದು ಅತ್ಯಂತ ಆಸಕ್ತಿದಾಯಕವಾಗಿತ್ತು.

ಮೂಡಿಬಂದಿರುವ ಅನುವಾದವು ಓದಿಸಿಕೊಂಡು ಹೋಗುತ್ತದೆಯೇ ಎಂಬುದನ್ನು ಪರಿಶೀಲಿಸಲು ಆದ್ಯತೆಯ ಮೇರೆಗೆ ವಿಜ್ಞಾನದ ಹಿನ್ನೆಲೆಯುಳ್ಳ ಮತ್ತೊಬ್ಬ ಭಾಷಾ ವಿದ್ವಾಂಸರನ್ನು ಹೆಚ್ಚುವರಿಯಾಗಿ ಸೇರಿಸಿಕೊಳ್ಳುವುದು ಹಾಗೂ ನಿರ್ದಿಷ್ಟ ವೈಜ್ಞಾನಿಕ ಪದಗಳನ್ನುಳ್ಳ ಪಾರಿಭಾಷಿಕ ಪದಕೋಶವೊಂದನ್ನು ಸಿದ್ಧಪಡಿಸುವುದು– ಇವು ತಂಡವು ಚರ್ಚಿಸಿದ ಇನ್ನಿತರ ಪ್ರಮುಖ ಸಂಗತಿಗಳು. ಪಂಜಾಬಿನ ಮೊಹಾಲಿಯಲ್ಲಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಅಂಡ್ ರಿಸರ್ಚ್ ಸಂಸ್ಥೆಗೆ ಸೇರಿದ ಇಂತಹುದೇ ತಂಡವು ಬರ್ಕ್‌ಲೀ ಸರಣಿಯ ಹಿಂದಿ ಅವತರಣಿಕೆಯನ್ನು ಸಿದ್ಧಪಡಿಸುತ್ತಿದೆ. ಅಲ್ಲಿನ ತಂಡದ ಸದಸ್ಯರ ಅನುಭವಗಳಿಂದ ಕಲಿಯುವ ಉದ್ದೇಶವನ್ನು ಬೆಂಗಳೂರಿನ ತಂಡವು ಹೊಂದಿತ್ತು. ಪ್ರಸ್ತುತ ಹಾಗೂ ಸಂಬಂಧಿತ ಟಿಪ್ಪಣಿಗಳನ್ನು ವಿನಿಮಯಿಸಿಕೊಳ್ಳಲು ತಂಡದ ಸದಸ್ಯರು ಉತ್ಸುಕರಾಗಿದ್ದರು.

ಭೌತವಿಜ್ಞಾನದಂತೆಯೇ, ಹಿಂದಿ ಭಾಷೆ ಮಾತನಾಡುವ ಎಲ್ಲ ರಾಜ್ಯಗಳಲ್ಲಿ ಮತ್ತು ಕರ್ನಾಟಕದಲ್ಲಿ ಜೀವವಿಜ್ಞಾನ, ಗಣಿತವಿಜ್ಞಾನ, ಮಾನವಿಕ, ಅರ್ಥಶಾಸ್ತ್ರ, ಇತಿಹಾಸ, ತತ್ತ್ವಶಾಸ್ತ್ರ, ಸಮಾಜವಿಜ್ಞಾನ, ಮನೋವಿಜ್ಞಾನ ಮುಂತಾದ ವಿಷಯಗಳನ್ನು ಅನುವಾದಿಸುವವರ ಹಲವಾರು ತಂಡಗಳನ್ನು ರಚಿಸಲಾಗಿದೆ. ಅನುವಾದಕರು, ಪರಿಶೀಲಕರು ಹಾಗೂ ಪುನರಾವಲೋಕನ ಮಾಡುವವರು ತಮ್ಮೊಡನೆ ನಿರ್ದಿಷ್ಟ ವಿಷಯಜ್ಞಾನ ಹಾಗೂ ಬೋಧನೆ ಅಥವಾ ಸಂಶೋಧನೆಯಲ್ಲಿನ ಸಮೃದ್ಧ ಅನುಭವಗಳನ್ನು ತರುತ್ತಾರೆ. ಅವರು ಇಂಗ್ಲಿಷ್ ಮತ್ತು ಹಿಂದಿ ಅಥವಾ ಇಂಗ್ಲಿಷ್ ಮತ್ತು ಕನ್ನಡ ಹೀಗೆ ಎರಡು ಭಾಷೆಗಳಲ್ಲಿ ಸಾಕಷ್ಟು ಸಾಮರ್ಥ್ಯವನ್ನು ಹೊಂದಿರಬೇಕಾದುದು ಅಗತ್ಯ. ಈ ಶೈಕ್ಷಣಿಕ ಮರುಸೃಷ್ಟಿಯ ಕಾರ್ಯದ ಭಾಗವಾಗಿರುವವರಲ್ಲಿ ಬಹುತೇಕ ಪ್ರತಿಯೊಬ್ಬರೂ ಸ್ವಇಚ್ಛೆಯಿಂದ ಸೇರಿದವರಾಗಿರುತ್ತಾರೆ. ಏಕೆಂದರೆ, ಅವರು ರಾಜ್ಯದ ದೂರ

ಪ್ರದೇಶದಲ್ಲಿರುವ ಅಗಾಧ ಸಂಖ್ಯೆಯ ಅವಕಾಶವಂಚಿತ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಹರಡುವ ಮಹಾನ್ ಉದ್ದೇಶದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಆಸಕ್ತಿಯನ್ನು ಹೊಂದಿರುತ್ತಾರೆ. ಕರ್ನಾಟಕವೊಂದರಲ್ಲಿಯೇ ಸುಮಾರು ಇಪ್ಪತ್ತು ಚಿಕ್ಕ ಚಿಕ್ಕ ವಿಷಯ–ನಿರ್ದಿಷ್ಟ ಗುಂಪುಗಳಲ್ಲಿ ಕೆಲಸ ಮಾಡುತ್ತಿರುವ ನೂರಿಪ್ಪತ್ತಕ್ಕೂ ಹೆಚ್ಚು ಕನ್ನಡಿಗರಿದ್ದಾರೆ.

ಭೌತವಿಜ್ಞಾನದ ಗುಂಪಿನಂತಹ ವಿಷಯತಜ್ಞರ ಪ್ರಯತ್ನಗಳು, ಅವರು ಅಭಿವೃದ್ಧಿ ಪಡಿಸುವ ಸಾಮಗ್ರಿಯು ಉನ್ನತ ಶಿಕ್ಷಣ ಹಂತದಲ್ಲಿರುವ ಸಾವಿರಾರು ವಿದ್ಯಾರ್ಥಿಗಳಿಗೆ ಲಭ್ಯವಾದಾಗ ಮಾತ್ರ ಫಲಪ್ರದವಾಗುತ್ತವೆ. ಅದಿಲ್ಲದಿದ್ದಾಗ ಆ ವಿದ್ಯಾರ್ಥಿಗಳಿಗೆ ತಮ್ಮದೇ ಭಾಷೆಯಲ್ಲಿ ಒಳ್ಳೆಯ ಗುಣಮಟ್ಟದ ಕಲಿಕೆಯ ಸಾಮಗ್ರಿಯು ಸಿಗುವುದಿಲ್ಲ. ಕರ್ನಾಟಕವೊಂದರಲ್ಲೇ ನಾನೂರಕ್ಕೂ ಹೆಚ್ಚು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಮುನ್ನೂರು ಅನುದಾನಿತ ಕಾಲೇಜುಗಳು ಹಾಗೂ ಹಲವು ಅಂಗಸಂಸ್ಥೆಗಳ ಮೇಲುಸ್ತುವಾರಿ ಹೊಂದಿರುವ ಹದಿನೈದು ವಿಶ್ವವಿದ್ಯಾಲಯಗಳಿವೆ. ಅವು ಹಲವಾರು ಪದವಿ ಕಾರ್ಯಕ್ರಮಗಳನ್ನು ನೀಡುತ್ತವೆ. ಅನುದಾನರಹಿತ ಖಾಸಗಿ ಸಂಸ್ಥೆಗಳಲ್ಲಿ ಓದುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳ ಜೊತೆಗೆ, ಈ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯೇ ಸುಮಾರು ಮೂರು ಲಕ್ಷ ಇದೆ. ಈ ವಿದ್ಯಾರ್ಥಿಗಳಿಗೆ ಅನುವಾದಿತ ಸಾಮಗ್ರಿಯು ಸುಲಭವಾಗಿ ದೊರಕುವಂತಾದಾಗ ಮಾತ್ರ, ಪ್ರಧಾನ ವಿಷಯಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಏಕಕಾಲಕ್ಕೆ ಇಂಗ್ಲಿಷ್ ಪಠ್ಯಪುಸ್ತಕಗಳನ್ನು ಅಥವಾ ಅನುವಾದಿತ ಕನ್ನಡ ಆವೃತ್ತಿಗಳನ್ನು ಆಯ್ದುಕೊಳ್ಳುವ ಅವಕಾಶ ಅವರಿಗೆ ಇರುತ್ತದೆ.

ಹಲವಾರು ಪ್ರಸ್ತುತ ವಿಷಯಗಳಿಗೆ ಸಂಬಂಧಿಸಿದಂತೆ, ಕನ್ನಡದಲ್ಲಿ ಸಾಂದರ್ಭಿಕ ಶೈಕ್ಷಣಿಕ ಸಾಹಿತ್ಯವನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವನ್ನು ಮೇಲಿನ ತರಹದ ಅನುವಾದ ಕಾರ್ಯವು ಭಾಗಶಃ ಈಡೇರಿಸುತ್ತದೆ. ಸರ್ಕಾರವು ಬರ್ಕ್‌ಲೀ ಸರಣಿಯಂತಹ ಪುಸ್ತಕಗಳ ಅನುವಾದಿತ ಅವತರಣಿಕೆಯನ್ನು ಪದವಿಪೂರ್ವ ಹಾಗೂ ಪದವಿ ಹಂತದ ಎಲ್ಲಾ ಕಾಲೇಜುಗಳ ಗ್ರಂಥಾಲಯಗಳಿಗೆ ಒದಗಿಸುವುದಾದರೆ ಅದು ನಿಜಕ್ಕೂ ಒಂದು ಅದ್ಭುತವಾದ ಆಲೋಚನೆ. ಇದರಿಂದ ಬೀದರ್ ಮತ್ತು ಚಾಮರಾಜನಗರದಂತಹ ದೂರದೂರದ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ವಿಜ್ಞಾನ ಅಥವಾ ಮಾನವಿಕ ವಿಷಯಗಳೆರಡನ್ನೂ ಒಂದೇ ರೀತಿಯಲ್ಲಿ ಗಂಭೀರವಾಗಿ ತೆಗೆದುಕೊಳ್ಳಲು ಉತ್ತೇಜನ ದೊರಕಬಹುದು. ಆ ಮೂಲಕ ಶಿಕ್ಷಣವೂ ಸೇರಿದಂತೆ ವಿಭಿನ್ನ ಕ್ಷೇತ್ರಗಳಲ್ಲಿ ತಮ್ಮ ವೃತ್ತಿಯನ್ನು ರೂಪಿಸಿಕೊಳ್ಳುವುದು ಸಾಧ್ಯವಾಗಬಹುದು.

■ ಬಿ.ಫಸ್ಟ್, 08–11–2017